**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.932/2022**

ಅಸಾಃ5 (ಚಾಸಾ-6)

| | |
|---|---|
| ಹೆಸರು | ಸುರೇಶ ಹಿಪ್ಪರಗಿ |
| ತಂದೆಯ /ಗಂಡನ ಹೆಸರು | ಬಸಪ್ಪ |
| ವಯಸ್ಸು | 63 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಬೆಳಗಲಿ |

ದಿನಾಂಕ 18-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ-1,4,5 ಮತ್ತು 7 ರವರ ಪರಿಚಯ ಇದೆ .1 ನೇ ಆರೋಪಿಯ ಪರಿಚಯ ಇರುತ್ತದೆ . ಸುಮಾರು 03 ವರ್ಷಗಳ ಹಿಂದೆ ನಾನು ಚಾಸಾ- 7 ರವರು ಕೂಡಿ ಸೈದಾಪೂರಕ್ಕೆ ಹೋಗುತ್ತಿದ್ದಾಗ ಮಹಾಲಿಂಗಪೂರದ ಕೆಸರಗೊಪ್ಪ ಕ್ರಾಸ ಹತ್ತಿರ ಚಾಸಾ- 5 ರವರು ಚಾಸಾ-4 ಮತ್ತು 1 ರವರನ್ನು ಮೋಟಾರ ಸೈಕಲ ಮೇಲೆ ಕೂಡ್ರಿಸಿಕೊಂಡು ಹೋಗುತ್ತಿದ್ದು, ಅವರು ರಸ್ತೆ ತಿರುವಿನಲ್ಲಿ ದಾಟಲು ಕೈ ಮಾಡಿ ಹೋಗುತ್ತಿದ್ದಾಗ ಗೋಕಾಕ ಕಡೆಯಿಂದ ಒಂದು ಬಿಳಿ ಕಾರ ಜೊರಾಗಿ ಬಂದು ಸದರಿಯವರ ಮೋಟಾರ ಸೈಕಲಕ್ಕೆ ಡಿಕ್ಕಿ ಪಡಿಸಿತ್ತು . ಆಗ ಚಾಸಾ-4 ರವರ ಕಾಲಿಗೆ ರಕ್ತ ಗಾಯವಾಗಿರುತ್ತದೆ . ಸದರಿ ಕಾರಿನ ನಂಬರ ಎಂ ಎಚ್ 31-ಬಿಕೆ 8837 ಅಂತಾ ಇರುತ್ತದೆ . ನಂತರ ನಾನು ಮತ್ತು ಚಾಸಾ-7 ರವರು ಕೂಡಿ ಚಾಸಾ-4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ನಾನು ದೂರನ್ನು ಬರೆದು ದಸ್ತೂರ ಅಂತಾ ಸಹಿ ಮಾಡಿರುತ್ತೇನೆ . ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ .

ಸಾಕ್ಷಿ ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಬಿ ಎಂದು ಗುರುತಿಸಲಾಯಿತು .

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ.ಎಸ್ ವಿ ಎಸ್ ವಕೀಲರಿಂದ:-**

ಚಾಸಾ- 1, 4 ಮತ್ತು 5 ರವರ ಪರಿಚಯ ಸುಮಾರು 10 ವರ್ಷಗಳಿಂದ ಇರುತ್ತದೆ . ಚಾಸಾ- 5

ರವರು ಚಲಾಯಿಸುತ್ತಿದ್ದ ಮೋಟಾರ ಸೈಕಲ ನಂಬರ ನನಗೆ ಹೇಳಲು ಬರುವದಿಲ್ಲ . ಚಾಸಾ- 5 ರವರು ಕಾನೂನುಬಾಹಿರವಾಗಿ ಒಟ್ಟು 03 ಜನರನ್ನು ಮೋಟಾರ ಸೈಕಲ ಮೇಲೆ ಕೂಡ್ರಿಸಿಕೊಂಡು ಅತೀ ಜೋರಾಗಿ ಚಲಾಯಿಸಿದ ಕಾರಣ ನಿಯಂತ್ರಣ ತಪ್ಪಿ ಸದರಿ ಮೋಟಾರ ಸೈಕಲದಿಂದ ಬಿದ್ದು ಅಪಘಾತ ಹೊಂದಿರುತ್ತಾರೆಂದರೆ ಸರಿಯಲ್ಲ . ಚಾಸಾ- 1 , 4 ಮತ್ತು 5 ರವರು ನನಗೆ ಬಹಳ ವರ್ಷಗಳಿಂದ ಪರಿಚಯ ಇರುವ ಕಾರಣ ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರು ಸದರಿಯವರಿಗೆ ಅನುಕೂಲವಾಗಲೀ ಎಂದು ಸುಳ್ಳು ದೂರನ್ನು ಬರೆದು ಅದರಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ .